1	2	3
6.	ಆಲ್ ಅಮೀನ್ ವೈದ್ಯಕೀಯ ಕಾಲೇಜು, ಬಿಜಾಪುರ	ಜಿಲ್ಲಾ ಆಸ್ಪತ್ರೆ, ಬಿಜಾಪುರ
7.	ಡಾ॥ ಅಂಬೇಡ್ಕರ್, ವೈದ್ಯಕೀಯ ಕಾಲೇಜು, ಬೆಂಗಳೂರು	ಕೆ.ಸಿ. ಜನರಲ್ ಆಸ್ಪತ್ರೆ, ಬೆಂಗಳೂರು
8.	ದೇವರಾಜ್ ಅರಸ್, ವೈದ್ಯಕೀಯ ಕಾಲೇಜ್, ಕೋಲಾರ	ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆ ಕೋಲಾರ
9.	ಬಸವೇಶ್ವರ ವೈದ್ಯಕೀಯ ಕಾಲೇಜು, ಚಿತ್ರದುರ್ಗ	ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ

ಅ) ಕ್ಲಿನಿಕಲ್ ಶುಲ್ಕ ಪಾವತಿ ಮಾಡುವ ಷರತ್ತಿಗೊಳಪಡಿಸಿ

ಇ) ಹೌದು

ಈ) ಈಗಾಗಲೇ ಸರ್ಕಾರಿ ಆದೇಶ ಹೊರಡಿಸಲಾಗಿದೆ.

ರಾಜ್ಯದ ಸರ್ಕಾರಿ ಪ್ರಾಥಮಿಕ ಕನ್ನಡ ಶಾಲೆಗಳಲ್ಲಿ ಇಂಗ್ಲೀಷ್ ವಿಷಯವನ್ನು ಕಲಿಸುವುದು

2037(2180) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸರ್ಕಾರಿ ಹಾಗೂ ಖಾಸಗಿ ಪ್ರಾಥಮಿಕ ಕನ್ನಡ ಶಾಲೆಗಳಲ್ಲಿ ಯಾವ ವರ್ಗದಿಂದ ಇಂಗ್ಲೀಷ್ ವಿಷಯವನ್ನು ಕಲಿಸಲಾಗುತ್ತಿದೆ;

ಆ) ಇನ್ನು ಮೇಲೆ ಯಾವ ವರ್ಗದಿಂದ ಇಂಗ್ಲೀಷ್ ಕಲಿಸಬೇಕೆಂದು ನಿರ್ಣಯಿಸಲಾಗಿದೆ;

ಇ) ರಾಜ್ಯದ ಕನ್ನಡ ಶಾಲೆಗಳಲ್ಲಿ ಮಾತೃಭಾಷೆ ಕನ್ನಡ, ಹಿಂದಿ ಮತ್ತು ಇಂಗ್ಲೀಷ್ ವಿಷಯಗಳನ್ನು ಕಡ್ಡಾಯವಾಗಿ ಕಲಿಸಲು ಪರಿಶೀಲಿಸಲಾಗುವುದೇ?

ಪ್ರೊ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಇಂಗ್ಲೀಷ್‌ನ್ನು 5ನೇ ತರಗತಿಯಿಂದ ದ್ವಿತೀಯ ಭಾಷೆಯಾಗಿ ಕಲಿಸಲಾಗುತ್ತಿದೆ.

ಆ) ಈ ಬಗ್ಗೆ ಸರ್ಕಾರ ಯಾವುದೇ ಆದೇಶ ಹೊರಡಿಸಿರುವುದಿಲ್ಲ.

ಇ) ಮೂರು ಭಾಷೆಗಳನ್ನು 6ನೇ ತರಗತಿಯಿಂದ ಕಲಿಸಲಾಗುತ್ತಿದೆ.

ತುಮಕೂರು ಕನ್ನಡ ಭವನ ನಿರ್ಮಾಣಕ್ಕೆ ಉಂಟಾಗಿರುವ ಅಡಚಣೆ

2038(2016) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರಿನ ಕನ್ನಡ ನಿರ್ಮಾಣ ಯೋಜನೆ ಯಾವ ಹಂತದಲ್ಲಿದೆ ;

ಆ) ಇದಕ್ಕಾಗಿ ನಿವೇಶನವನ್ನು ಸರ್ಕಾರ ಮಂಜೂರು ಮಾಡಿದೆಯೋ;

ಇ) ಇದರ ಮೌಲ್ಯವೆಷ್ಟು; ಯಾವಾಗ ಮಂಜೂರು ಮಾಡಲಾಯಿತು;

ಈ) ಈಗ ಈ ಜಾಗವನ್ನು ವಕೀಲರ ಸಂಘವು ನ್ಯಾಯಾಲಯದ ಜಾಗವೆಂದು ತಡೆಯಾಜ್ಞೆ ತಂದಿರುವ ವಿಚಾರ ನಿಜವೇ;